**ಆಳ್ವಾಸ್ ಕನ್ನಡ ಸಂಸ್ಕೃತಿ ಅಧ್ಯಯನ ಕೇಂದ್ರ**
**2015–16ನೇ ಸಾಲಿನ ಕಾರ್ಯಕ್ರಮ ವರದಿ**

ವಿದ್ಯಾರ್ಥಿಗಳ ಸಂಪೂರ್ಣ ವ್ಯಕ್ತಿತ್ವ ವಿಕಸನವನ್ನು ಧ್ಯೇಯವಾಗಿರಿಸಿಕೊಂಡ ಕನ್ನಡ ಸಂಸ್ಕೃತಿ ಅಧ್ಯಯನ ಕೇಂದ್ರವು ವಿಭಿನ್ನ ಹಾಗೂ ಹಲವು ವೈಶಿಷ್ಟ್ಯ ಪೂರ್ಣವಾದ ಕಾರ್ಯಕ್ರಮಗಳನ್ನು ಆಯೋಜಿಸಿತ್ತು. ವಿದ್ಯಾರ್ಥಿಗಳಲ್ಲಿರುವ ಸುಪ್ತವಾದ ಪ್ರತಿಭೆಯನ್ನು ಅನಾವರಣಗೊಳಿಸಲು ಒಂದು ಸೂಕ್ತವಾದ ವೇದಿಕೆಯನ್ನು ಕಲ್ಪಿಸುವುದು ಮತ್ತು ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವ ಮೂಲಕ ಮಾರ್ಗದರ್ಶನವನ್ನು ಮಾಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದಿತು.

ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಶಿವರಾಮ ಕಾರಂತರ 'ಬೆಟ್ಟದಜೀವ' ಕಾದಂಬರಿ ಆಧಾರಿತ ಪಿ. ಶೇಷಾದ್ರಿ ನಿರ್ದೇಶನದ ಕಲಾತ್ಮಕ ಸಿನಿಮಾವನ್ನು ಪ್ರದರ್ಶಿಸಲಾಯಿತು. ಪ್ರಕೃತಿ ಹಾಗೂ ಮನುಷ್ಯನ ನಡುವಿನ ಸಂಬಂಧ ಹಾಗೂ ಹೋರಾಟದ ನೆಲೆಗಳನ್ನು ಅಭಿವ್ಯಕ್ತಿಸುವ ಚಿತ್ರವು ಇದಾಗಿದ್ದು ವಿದ್ಯಾರ್ಥಿಗಳು ಸಿನಿಮಾ ವೀಕ್ಷಿಸಿ ನಂತರ ಚರ್ಚಿಸಿದರು. 'ಜೀವನದಲ್ಲಿ ಹಾಸ್ಯ' ಎಂಬ ವಿಷಯದ ಕುರಿತು ಪ್ರಸಿದ್ಧ ಹಾಸ್ಯ ಸಾಹಿತಿಗಳಾದ ಕು.ಗೋಪಾಲಭಟ್ಟ ಅವರು ದಿನನಿತ್ಯದ ಬದುಕಿನ ಹಾಸ್ಯ ಸನ್ನಿವೇಶಗಳನ್ನು ಗ್ರಹಿಸಬೇಕಾದ ನೆಲೆಗಳನ್ನು ವಿವರಿಸಿದರು. ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರೂ ಹಾಗೂ ಗಮಕಿಗಳೂ ಆದ ಡಾ.ಶ್ರೀಕಾಂತ್ ರಾವ್ ಸಿದ್ಧಾಪುರ ಅವರು ಹಳೆಗನ್ನಡದ ಮಹಾಕಾವ್ಯಗಳಲ್ಲಿನ ಪ್ರಮುಖ ಭಾಗಗಳನ್ನು ವಾಚಿಸಿ, ವ್ಯಾಖ್ಯಾನದ ಮೂಲಕ ಅದರ ಮಹತ್ವವನ್ನು ತಿಳಿಸಿದರು. ಮುಸ್ತಾಫಾ ಅವರು ಕನ್ನಡದಲ್ಲಿ ಬ್ಲಾಗ್ ಬರವಣಿಗೆ ಎಂಬ ವಿಷಯದ ಕುರಿತು ಕಾರ್ಯಾಗಾರವನ್ನು ನೆರವೇರಿಸಿದರು. ಕನ್ನಡದ ಪ್ರಸಿದ್ಧ ಬ್ಲಾಗ್‌ಗಳ ಪರಿಚಯ ಮತ್ತು ಬರವಣಿಗೆ ಕುರಿತು ಮಾಹಿತಿ ನೀಡಿದರು. ಆಳ್ವಾಸ್ ಆಯುರ್ವೇದ ಕಾಲೇಜಿನ ಉಪನ್ಯಾಸಕರಾದ ಡಾ.ಧೀರೇಂದ್ರ ಬಲ್ಲಾಳ್ ಅವರು ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಕುರಿತು ಕಾರ್ಯಾಗಾರವನ್ನು ನೆರವೇರಿಸಿಕೊಟ್ಟರು. ಜೀವನದಲ್ಲಿ ಸಂಯಮ, ಸಮಯಪಾಲನೆ, ಶಿಸ್ತು, ತಾಳ್ಮೆ, ಸಹೋದರತ್ವದ ಭಾವನೆ, ಒಗ್ಗಟ್ಟು, ಉದಾರ ಮನೋಭಾವಗಳನ್ನು ಹೇಗೆ ಬೆಳೆಸಿಕೊಳ್ಳಬೇಕೆಂಬುದರ ಬಗ್ಗೆ ತಿಳಿಹೇಳಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಔಷದೀಯ ಸಸ್ಯಕಾಶಿ 'ಶೋಭಾವನಕ್ಕೆ' ವಿದ್ಯಾರ್ಥಿಗಳು ಭೇಟಿ ನೀಡಿ ಅಮೂಲ್ಯ ಸಸ್ಯ ಸಂಪತ್ತನ್ನು ವೀಕ್ಷಿಸಿದರು. ನವಗ್ರಹವನ, ನಕ್ಷತ್ರವನ, ರಾಶಿವನ ಔಷಧೀಯ ಸಸ್ಯವನ ಮುಂತಾದವುಗಳ ಮಹತ್ವವನ್ನು ಅರಿತುಕೊಂಡರು ರಾಜ್ಯೋತ್ಸವದ ಅಂಗವಾಗಿ ಕವಿ ನಮನ ಕಾರ್‍ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳು ಕುವೆಂಪು, ಜಿ.ಎಸ್.ಎಸ್, ಅಡಿಗ, ಬೇಂದ್ರೆ ಮುಂತಾದ ಕವಿಗಳ ಗೀತೆಗಳನ್ನು ಹಾಡುವ ಮೂಲಕ ಕವಿಗಳಿಗೆ ನಮನ ಸಲ್ಲಿಸಿದರು.

ವಿದ್ಯಾರ್ಥಿಗಳಲ್ಲಿ ಬರವಣಿಗೆ ಸೃಜನಶೀಲತೆ ಹೆಚ್ಚಿಸುವ ಸಲುವಾಗಿ 'ಸಣ್ಣಕಥಾರಚನೆ ಮತ್ತು ವಾಚನ' ಅಂಕಣ ಬರಹ ಸಂಗ್ರಹ, ಕವನ ರಚನೆ ಮುಂತಾದ ಕಾರ್‍ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಆಧ್ಯಾತ್ಮ ಮತ್ತು ವಿಜ್ಞಾನದ ಕುರಿತು ಮಂಗಳೂರಿನ ಕೃಷ್ಣಾಪ್ರಜ್ಞಸಂಘದ ಗುರೂಜಿ ಶ್ರೀನೇಮ ನಿಷ್ಠದಾಸ್ ಅವರು ಕಾರ್‍ಯಕ್ರಮ ನೆರವೇರಿಸಿಕೊಟ್ಟರು. ಹಾಗೆಯೇ ವಿದ್ಯಾರ್ಥಿಗಳ ಪ್ರತಿಭೆ ಅರಿಯಲು ಪ್ರತಿಭಾದರ್ಶನ ಕಾರ್‍ಯಕ್ರಮ ಮತ್ತು ಸಭಾಕಂಪನವನ್ನು ಕಳೆಯಲು ಚರ್ಚಾಸ್ಪರ್ಧೆ, ಆಶುಭಾಷಣ ಸ್ಪರ್ಧೆ, ನಮ್ಮೂರು ನಮ್ಮ ಜನ, ನಮ್ಮೂರಿನ ಅಲಕ್ಷಿತ ಸಾಧಕರ ಮಾಹಿತಿ ಹೀಗೆ ಹಲವು ಚಟುವಟಿಕೆಗಳ ಜೊತೆಗೆ ವರ್ಷದಲ್ಲಿ ಒಟ್ಟು 21 ಕಾರ್‍ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.

ಡಾ.ಎನ್.ಪ್ರವೀಣ್‌ಚಂದ್ರ
ಸಂಚಾಲಕರು




ಕನ್ನಡ ಸಂಘ




ಶೋಭಾವನ
SHOBHAVANA
ಮಿಜಾರು-574 225, ದ.ಕ.
MIJAR-574 225, D.K.
SPONSERED BY : ALVA'S EDUCATION FOUNDATION (R), MOODBIDRI
A UNIT OF ALVA'S AYURVEDA MEDICAL




ಕನ್ನಡ ಸಂಘ

